# ಪರ್ಯಾಯ ಶೈಕ್ಷಣಿಕ ಯೋಜನೆ : 2021–22

**ತರಗತಿ : 10** **ತಿಂಗಳು : ಫೆಬ್ರವರಿ** **ವಿಷಯ : ದ್ವಿತೀಯ ಭಾಷೆ–ಕನ್ನಡ**

| ಕ್ರ.ಸಂ | ತಿಂಗಳು / ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| 01 | **ಫೆಬ್ರವರಿ** ಮೊದಲನೆಯ ವಾರ | **ಪದ್ಯ : ನಿಟ್ಟೋಟದಲಿ ಹಾಯ್ದನು ಬಿಟ್ಟ ಮಂಡೆಯಲಿ**<br>• ಛಂದಸ್ಸಿನ ಪರಿಚಯ ಮಾಡಿಕೊಳ್ಳುವರು | • ಶಿಕ್ಷಕರು ಛಂದಸ್ಸು ಮತ್ತು ಛಂದಸ್ಸಿನ ವಿಧಗಳ ಪರಿಚಯ ಮಾಡಿಕೊಡುವರು.<br>• ಪ್ರಾಸ, ಯತಿ, ಗಣಗಳ ಪರಿಚಯ ಮಾಡುವರು.<br>• ಪ್ರಸ್ತಾರ ಹಾಕಿ ಗಣ ವಿಭಾಗಿಸುವ ಕ್ರಮವನ್ನು ಪರಿಚಯಿಸುವರು.<br>• ಷಟ್ಪದಿಯ ಸಾಮಾನ್ಯ ಲಕ್ಷಣಗಳನ್ನು ಪರಿಚಯಿಸುವುದು.<br>• ಭಾಮಿನಿ ಷಟ್ಪದಿಯ ಲಕ್ಷಣಗಳನ್ನು ಉದಾಹರಣೆ ಮೂಲಕ ತಿಳಿಸುವುದು.<br>• ಪದಗಳಿಗೆ ಲಘು ಗುರು ಹಾಕುವ ಕ್ರಮವನ್ನು ಅಭ್ಯಾಸ ಹಾಳೆಯ ಮೂಲಕ ತಿಳಿಸುವುದು.<br>**(ಅಭ್ಯಾಸ ಹಾಳೆ –01)** | |
| 01 | | • ವಿರಾಟ ಪರ್ವದ ಪ್ರಾರಂಭದ ಕಥೆಯನ್ನು ಹೇಳುವರು.<br>• ಕವಿ ಪರಿಚಯ ಮಾಡಿಕೊಳ್ಳುವರು. | • ಮಹಾಭಾರತದಲ್ಲಿ ಬರುವ ಪ್ರಮುಖ ಪಾತ್ರಧಾರಿಗಳ ಹೆಸರನ್ನು ಪಟ್ಟಿ ಮಾಡಿಸುವುದು.<br>• ಪಾಂಡವರು ಅಜ್ಞಾತವಾಸಕ್ಕಾಗಿ ವಿರಾಟನ ಆಸ್ಥಾನದಲ್ಲಿ ಆಶ್ರಯ ಪಡೆದ ಕಥೆಯನ್ನು ಹೇಳಲು ವಿದ್ಯಾರ್ಥಿಗಳಿಗೆ ಪ್ರೇರೇಪಿಸುವುದು. | ಕವಿ ಪರಿಚಯ ವಾಕ್ಯ ರೂಪದಲ್ಲಿ ಬರೆಸುವುದು. |

| | | | | |
|---|---|---|---|---|
| | | | • ಕವಿ ಪರಿಚಯದ ಧ್ವನಿ ಸುರುಳಿಯನ್ನು ಕೇಳಿಸುವ ಮೂಲಕ ಕುಮಾರವ್ಯಾಸನ ಪರಿಚಯ ಮಾಡುವುದು. | |
| | | • ಪದ್ಯವನ್ನು ಗಮಕ ಶೈಲಿಯಲ್ಲಿ ಹಾಡುವರು. | • ಗಮಕ ವಾಚನದ ಆಡಿಯೋ ಬಳಸಿ ಗಮಕ ವಾಚನ ಮಾಡುವ ಬಗೆಯನ್ನು ಮಕ್ಕಳಿಗೆ ತಿಳಿಸುವುದು.<br>• ಸಾಮೂಹಿಕವಾಗಿ ನಿಗದಿತ ಪದ್ಯಭಾಗವನ್ನು ಗಮಕ ಶೈಲಿಯಲ್ಲಿ ಹಾಡಿಸುವುದು.<br>• ಪದ್ಯವನ್ನು ಅರ್ಥಪೂರ್ಣವಾಗಿ ವಿಭಾಗಿಸಿ ವಾಚಿಸುವ ಕ್ರಮವನ್ನು ತಿಳಿಸುವುದು. | |
| | **ಫೆಬ್ರವರಿ** ಎರಡನೆಯ ವಾರ | • ಪದ್ಯದ ಸಾರಾಂಶವನ್ನು ಗ್ರಹಿಸುವರು.<br>• ಪದ್ಯದ ಸಾರಾಂಶವನ್ನು ಅರ್ಥೈಸಿಕೊಂಡು ಸಂಭಾಷಣೆ ರೂಪದಲ್ಲಿ ಬರೆಯುವರು. | • ಪದ್ಯದಲ್ಲಿ ಅರ್ಜುನ ಮತ್ತು ಉತ್ತರಕುಮಾರನ ನಡುವೆ ನಡೆವ ಸಂಭಾಷಣೆಯನ್ನು ಶಿಕ್ಷಕರು ಸ್ವಾರಸ್ಯಕರವಾಗಿ ವಿವರಿಸುವರು.<br>• ಪದ್ಯದಲ್ಲಿ ಉತ್ತರಕುಮಾರ ಮತ್ತು ಅರ್ಜುನನ ನಡುವೆ ನಡೆಯುವ ಸಂಭಾಷಣೆಯನ್ನು ಗ್ರಹಿಸಿ ತಮ್ಮದೇ ಶೈಲಿಯಲ್ಲಿ ಸಂಭಾಷಣೆಗಳನ್ನು ರಚಿಸುವಂತೆ ಉತ್ತೇಜಿಸುವುದು. ಸೂಕ್ತ ಮಾರ್ಗದರ್ಶನ ನೀಡುವುದು. | ಕಂಠಪಾಠ ಪದ್ಯಗಳನ್ನು ಕಲಿತು ಬರೆಯಲು ಸೂಚಿಸುವುದು. |
| | | • ಸರಳ ಭಾಷಾಂಶಗಳನ್ನು ತಿಳಿಯುವರು | • ಸಮಾನಾರ್ಥಕ ಪದ, ತತ್ಸಮ ತದ್ಭವ ಹಾಗೂ ಸಮಾಸ ಪದಗಳು ಇವುಗಳನ್ನು ಅಭ್ಯಾಸ ಹಾಳೆಯ ಮೂಲಕ ಪರಿಚಯಿಸುವುದು.<br>**(ಅಭ್ಯಾಸ ಹಾಳೆ – 02)** | |
| | **ಫೆಬ್ರವರಿ** ಮೂರನೆಯ | • ರೂಪಕಾಲಂಕಾರದ ಪರಿಚಯ | • ರೂಪಕಾಲಂಕಾರದ ಲಕ್ಷಣ ಹಾಗೂ ಅದನ್ನು | |

| | | | | |
|---|---|---|---|---|
| | ವಾರ | ಮಾಡಿಕೊಳ್ಳುವರು.<br><br>• ಭಾಮಿನಿ ಷಟ್ಪದಿಯ ಪದ್ಯಕ್ಕೆ ಪ್ರಸ್ತಾರ ಹಾಕಿ ಗಣ ವಿಭಾಗಿಸುವುದನ್ನು ಅರಿಯುವರು. | ಸಮನ್ವಯಗೊಳಿಸಿ ಬರೆಯುವುದನ್ನು ಅಭ್ಯಾಸ ಹಾಳೆಯ ಮೂಲಕ ಪರಿಚಯ ಮಾಡಿಕೊಡುವುದು.<br>**(ಅಭ್ಯಾಸ ಹಾಳೆ–03)**<br>• ಅಭ್ಯಾಸ ಹಾಳೆಯ ಮೂಲಕ ಪ್ರಸ್ತಾರ ಹಾಕುವುದು ಮತ್ತು ಗಣ ವಿಭಾಗ ಕ್ರಮವನ್ನು ಅಭ್ಯಾಸ ಮಾಡಿಸುವುದು.<br>**(ಅಭ್ಯಾಸ ಹಾಳೆ –04)** | |
| | **ಫೆಬ್ರವರಿ**<br>ನಾಲ್ಕನೆಯ ವಾರ | • ಪತ್ರಲೇಖನ ಬರೆಯುವ ಕ್ರಮ ಅರಿಯುವರು. | • ವ್ಯವಹಾರಿಕ ಪತ್ರ ಬರೆಯುವ ಕ್ರಮವನ್ನು ಸೂಕ್ತ ಉದಾಹರಣೆ ಮೂಲಕ ತಿಳಿಸುವುದು.<br>**(ಅಭ್ಯಾಸ ಹಾಳೆ– 05)** | |

## ಅಭ್ಯಾಸ ಹಾಳೆ 01

## ನಿಟ್ಟೋಟದಲಿ ಹಾಯ್ದನು ಬಿಟ್ಟ ಮಂಡೆಯಲಿ

➢ ಈ ಕೆಳಗಿನ ಪದಗಳಿಗೆ ಮಾದರಿಯಂತೆ ಪ್ರಸ್ತಾರ ಹಾಕಿ (ಲಘು–ಗುರು), ಆ ಪದದಲ್ಲಿರುವ ಒಟ್ಟು ಮಾತ್ರೆಗಳ ಸಂಖ್ಯೆಯನ್ನು ಬರೆಯಿರಿ

| ಪದ | ಪ್ರಸ್ತಾರ | ಮಾತ್ರೆಗಳ ಸಂಖ್ಯೆ | | ಪದ | ಪ್ರಸ್ತಾರ | ಮಾತ್ರೆಗಳ ಸಂಖ್ಯೆ |
|---|---|---|---|---|---|---|
| ನಿಟ್ಟೋಟ | _ _ U | 05 | | ಎಂದೊಡರ್ಜುನ | _U_UU | 07 |
| ಬಲಗಡಲ | | | | ರಥವನು | | |
| ಮೋಹರ | | | | ನೂಕಲು | | |
| ಮೃಡನು | | | | ಸಾರಥಿ | | |
| ನಾಲ್ಕೆಂಟಡಿ | | | | ಸಂವರಿಸಿ | | |
| ಪಾತಕವ | | | | ಭೂಸುರ | | |
| ಅಶ್ವಮೇಧ | | | | ಪ್ರತ್ಯಕ್ಷವಾಗಿ | | |
| ಇಂದ್ರಪದವಿ | | | | ಅರಸುತನ | | |
| ಎಮ್ಮರಮನೆಯ | | | | ನಾರಿಯರೆ | | |
| ಕಳುಹೆಂದ | | | | ಧುಮ್ಮಿಕ್ಕಿದನು | | |
| ಹಾಯ್ದನು | | | | ಸಭೆಯಲಿ | | |
| ಸೊರಹಿದೆ | | | | ರಿಪುವಾಹಿನಿ | | |
| ನಡೆಯೆಂದ | | | | ನಾಡನರಿ | | |
| ನಿಮ್ಮಣ್ಣನಂ | | | | ಪಿಡಿದುಯ್ದುದು | | |
| ಸೆರೆಯಿಂ | | | | ದುಃಖಿತ | | |
| ಕಾಡಿನೊಳ್ | | | | ಕಂದಮೂಲ | | |
| ಗಂಧರ್ವರ | | | | ಪುರದ | | |
| ರೂಪಿಂದೆ | | | | ಪೋಗುತಿದೆ | | |
| ಭಾಗ್ಯವಂತ | | | | ಗೋದಾವರಿ | | |
| ಜಾಣರು | | | | ಕಲಿಯುಗ | | |
| ಶಿವಶಿವ | | | | ಹಾಡಿದನೆಂದರೆ | | |
| ಭಾರತ | | | | ಉತ್ತರಕುಮಾರ | | |

**ಅಭ್ಯಾಸ ಹಾಳೆ 02**

**ನಿಟ್ಟೋಟದಲಿ ಹಾಯ್ದನು ಬಿಟ್ಟ ಮಂಡೆಯಲಿ**

- **ಈ ಕೆಳಗಿನ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ.**

**ಮಾದರಿ : ಸೈನ್ಯ – ಬಲ, ಮೋಹರ, ವಾಹಿನಿ, ಸೇನೆ, ದಳ**

| | |
|---|---|
| ಯುದ್ಧ | |
| ರಣರಂಗ | |
| ರಾಜ | |
| ಭೂಮಿ | |
| ಶಿವ | |

- **ಈ ಕೆಳಗಿನ ಪದಗಳಿಗೆ ಮಾದರಿಯಂತೆ ತತ್ಸಮ–ತದ್ಭವ ಪದಗಳನ್ನು ಹೊಂದಿಸಿ ಬರೆಯಿರಿ.**

| | | |
|---|---|---|
| ಪೃಥ್ವಿ | ಮೊಗ | **ಪೃಥ್ವಿ – ಪೊಡವಿ** |
| ಸುಖ | ದನಿ | |
| ಮುಖ | ಜುದ್ದ | |
| ಅದ್ಭುತ | ಸಿಂಗಾರ | |
| ಧ್ವನಿ | ಸೊಗ | |
| ಗಳಿಗೆ | ಪೊಡವಿ | |
| ಶೃಂಗಾರ | ಘಟಿಕಾ | |
| ಯುದ್ಧ | ಅದುಬುತ | |

**ಈ ಕೆಳಗಿನ ಸಮಾಸ ಪದಗಳನ್ನು ವಿಗ್ರಹ ವಾಕ್ಯ ಮಾಡಿ ಸಮಾಸದ ಹೆಸರನ್ನು ಬರೆಯಿರಿ.**

| ಸಮಾಸ ಪದ | ವಿಗ್ರಹ ವಾಕ್ಯ | ಸಮಾಸದ ಹೆಸರು |
|---|---|---|
| **ಅರಮನೆ** | **ಅರಸನ + ಮನೆ** | **ತತ್ಪುರುಷ ಸಮಾಸ** |
| ವನಜಮುಖಿ | | |
| ನಿಟ್ಟೋಟ | | |
| ಬಲಗಡಲು | | |
| ಮುಂಜೆರಗು | | |
| ಇಂದ್ರಪದವಿ | | |

**ಅಭ್ಯಾಸ ಹಾಳೆ 03**

**ನಿಟ್ಟೋಟದಲಿ ಹಾಯ್ದನು ಬಿಟ್ಟ ಮಂಡೆಯಲಿ**

➢ **ಈ ಕೆಳಗಿನ ಅಲಂಕಾರ ವಾಕ್ಯವನ್ನು ಮಾದರಿಯಂತೆ ಸಮನ್ವಯಗೊಳಿಸಿ ಬರೆಯಿರಿ.**

| | |
|---|---|
| **ಉತ್ತರಕುಮಾರನು ಕೌರವರ ಬಲಗಡಲನ್ನು ಕಂಡು ಅಂಜಿದನು.** | |
| **ಅಲಂಕಾರ** ರೂಪಕ ಅಲಂಕಾರ | |
| **ಲಕ್ಷಣ –** ಉಪಮೇಯ ಮತ್ತು ಉಪಮಾನಗಳ ನಡುವೆ ಅಭೇದ ಸಂಬಂಧವನ್ನು ಸೂಚಿಸಿ ವರ್ಣಿಸಿದರೆ ಅದು ರೂಪಕಾಲಂಕಾರ ಎಂದೆನಿಸುತ್ತದೆ. | |
| ಉಪಮೇಯ | ಬಲ (ಕೌರವರ ಸೇನೆ) |
| ಉಪಮಾನ | ಕಡಲು |
| ಸಮನ್ವಯ :ಇಲ್ಲಿ ಉಪಮೇಯವಾದ ಕೌರವರ ಬಲವನ್ನು ಉಪಮಾನವಾದ ಕಡಲಿನೊಂದಿಗೆ ಅಭೇದ ಸಂಬಂಧವನ್ನು ಕಲ್ಪಿಸಿ ವರ್ಣಿಸಿರುವುದರಿಂದ ಇದು ರೂಪಕಾಲಂಕಾರವಾಗಿದೆ. | |

| | |
|---|---|
| **ಸೀತೆಯ ಮುಖಕಮಲ ಅರಳಿತು** | |
| **ಅಲಂಕಾರ** - | |
| **ಲಕ್ಷಣ –** | |
| ಉಪಮೇಯ | |
| ಉಪಮಾನ | |
| ಸಮನ್ವಯ : | |

| | |
|---|---|
| **ಉತ್ತರಕುಮಾರನು ವನಜಮುಖಿಯರ ಮುಂದೆ ಜಂಬವನ್ನು ಕೊಚ್ಚಿಕೊಂಡನು.** | |
| **ಅಲಂಕಾರ** - | |
| **ಲಕ್ಷಣ –** | |
| ಉಪಮೇಯ | |
| ಉಪಮಾನ | |
| ಸಮನ್ವಯ : | |

## ಅಭ್ಯಾಸ ಹಾಳೆ 04

## ನಿಟ್ಟೋಟದಲಿ ಹಾಯ್ದನು ಬಿಟ್ಟ ಮಂಡೆಯಲಿ

- ಈ ಕೆಳಗಿನ ಪದ್ಯಭಾಗಕ್ಕೆ ಮಾದರಿಯಂತೆ ಪ್ರಸ್ತಾರ ಹಾಕಿ ಗಣ ವಿಭಾಗಿಸಿ .

| | | | |
|---|---|---|---|
| UUU | _UU | _U | _ UU |
| ಕಡೆಗೆ | ಹಾಯವು | ಕಂಗ | ಳೀ ಬಲ |

| | | | |
|---|---|---|---|
| UUU | UU_ | _ U | _ UU |
| ಗಡಲ | ಮನವೀ | ಸಾಡ | ಲಾರದು |

| | | | | | | |
|---|---|---|---|---|---|---|
| UUU | UUUU | _U | _U U | _ U | _UU | _ |
| ವೊಡಲು | ವಿಡಿದಿರ | ಲೇನ | ಕಾಣಲು | ಬಾರ | ದದ್ಭುತ | ವ |

ಎಂದೊಡರ್ಜುನ ನಗುತ ರಥವನು

ಮುಂದೆ ನಾಲ್ಕೆಂಟಡಿಯ ನೂಕಲು

ಕೊಂದನೀ ಸಾರಥಿಯೆನುತ ಸಂವರಿಸಿ ಮುಂಜೆರಗ

ಬಂದು ಮೆಲ್ಲನೆ ರಥದ ಹಿಂದಕೆ

ನಿಂದು ಧುಮ್ಮಿಕ್ಕಿದನು ಬದುಕಿದೆ

ನೆಂದು ನಿಟ್ಟೋಟದಲಿ ಹಾಯ್ದನು ಬಿಟ್ಟಮಂಡೆಯಲಿ

**ಅಭ್ಯಾಸ ಹಾಳೆ 05**

**ಪತ್ರಲೇಖನ : ವ್ಯವಹಾರಿಕ ಪತ್ರ**

**ಮಾದರಿ ಪತ್ರ ರಚನೆ**

**ನಿಮ್ಮನ್ನು ಮಂಡ್ಯದ ಸರ್ಕಾರಿ ಪ್ರೌಢಶಾಲೆಯ 'ಭಾನುಮತಿ' ಎಂದು ಭಾವಿಸಿಕೊಂಡು ನಿಮ್ಮ ಶಾಲೆಯ ವನಮಹೋತ್ಸವ ಕಾರ್ಯಕ್ರಮದ ಅಂಗವಾಗಿ ಶಾಲೆಯ ಆವರಣದಲ್ಲಿ ಗಿಡ ನೆಡಲು ವಿವಿಧ ಬಗೆಯ ಸಸ್ಯಗಳನ್ನು ನೀಡುವಂತೆ ವಲಯ ಅರಣ್ಯಾಧಿಕಾರಿಯವರಿಗೆ ಒಂದು ಪತ್ರ ಬರೆಯಿರಿ**

**ಇವರಿಂದ**
ಭಾನುಮತಿ
ಸರ್ಕಾರಿ ಪ್ರೌಢಶಾಲೆ
ಮಂಡ್ಯ

**ಇವರಿಗೆ**
ವಲಯ ಅರಣ್ಯಾಧಿಕಾರಿಯವರು
ಅರಣ್ಯ ಇಲಾಖೆ
ಮಂಡ್ಯ

ಮಾನ್ಯರೇ,

ವಿಷಯ: ಶಾಲಾ ಆವರಣದಲ್ಲಿ ಗಿಡ ನೆಡಲು ವಿವಿಧ ಬಗೆಯ ಸಸ್ಯಗಳನ್ನು ಒದಗಿಸುವಂತೆ ಕೋರಿ,

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ನಮ್ಮ ಶಾಲೆಯಲ್ಲಿ ಇಕೋ ಕ್ಲಬ್ ವತಿಯಿಂದ ವನಮಹೋತ್ಸವ ಕಾರ್ಯಕ್ರಮ ಆಚರಿಸುತ್ತಿದ್ದು, ಈ ಕಾರ್ಯಕ್ರಮದ ಅಂಗವಾಗಿ ಶಾಲಾ ಆವರಣದಲ್ಲಿ ಖಾಲಿ ಇರುವ ಸ್ಥಳದಲ್ಲಿ ಗಿಡಗಳನ್ನು ನೆಡಲು ಬಯಸಿದ್ದೇವೆ. ಆದ್ದರಿಂದ ತಾವು ನಮ್ಮ ಶಾಲೆಗೆ ತಮ್ಮ ಇಲಾಖೆಯಿಂದ ವಿವಿಧ ಬಗೆಯ ಸಸ್ಯಗಳನ್ನು ಉಚಿತವಾಗಿ ನೀಡಬೇಕೆಂದು ಕೋರುತ್ತೇನೆ.

ವಂದನೆಗಳೊಂದಿಗೆ

ದಿನಾಂಕ : 20–01–2022
ಸ್ಥಳ : ಮಂಡ್ಯ

ತಮ್ಮ ನಂಬುಗೆಯ
ಭಾನುಮತಿ

**ನಿಮ್ಮನ್ನು ಹಾವೇರಿ ಜಿಲ್ಲೆಯ ಕರ್ಜಗಿ ಗ್ರಾಮದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ ಸುಮತಿ ಎಂದು ಭಾವಿಸಿ, ನಿಮ್ಮ ವರ್ಗಾವಣೆ ಪ್ರಮಾಣ ಪತ್ರವನ್ನು ಕೋರಿ ಮುಖ್ಯಶಿಕ್ಷಕರಿಗೆ ಒಂದು ಪತ್ರ ಬರೆಯಿರಿ**